ಅಸಂಘಟಿತ ವಲಯ ಕಾರ್ಮಿಕರ ಕಲ್ಯಾಣ.

28 (17) ಶ್ರೀ ಶಂಕರಲಿಂಗೇಗೌಡ. ಹೆಚ್.ಎಸ್ (ಚಾಮರಾಜನಗರ): ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಸಂಘಟಿತ ವಲಯ ಕಾರ್ಮಿಕರ ಪಟ್ಟಿಯನ್ನು ಪರಿಷ್ಕರಿಸಿ ಹೊಸದಾಗಿ ಅಸಂಘಟಿತ ವಲಯ ಕಾರ್ಮಿಕರೆಂದು ಘೋಷಿಸಲು ಇರುವ ನಿಯಮಗಳೇನು; (ವಿವರ ನೀಡುವುದು)

ಆ) ರಾಜ್ಯದಾದ್ಯಂತ ಗುರುತಿಸಲಾಗಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ತಿಳಿಸುವುದು)

ಇ) ಅಸಂಘಟಿತ ವಲಯ ಕಾರ್ಮಿಕರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳಾವುವು; (ವಿವರ ನೀಡುವುದು)

ಈ) ಈ ಯೋಜನೆಗಳಡಿಯಿಂದ ಆಯ್ಕೆಯಾದ ಫಲಾನುಭವಿಗಳೆಷ್ಟು? (ಈ ಯೋಜನೆಗಳಡಿ ಸೌಲಭ್ಯ ಪಡೆಯಲಿಚ್ಛಿಸಿರುವವರ ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು):

ಅ) ಅಸಂಘಟಿತ ವಲಯ ಬಹು ವ್ಯಾಪ್ತಿಯಾಗಿದ್ದು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಅಡಿ ಅಸಂಘಟಿತ ವಲಯವನ್ನು ಈ ರೀತಿ ವ್ಯಾಖ್ಯಾನಿಸಲಾಗಿದೆ.

ಕಲಂ 2(ಎಲ್) "ಅಸಂಘಟಿತ ವಲಯ ಎಂದರೆ ವ್ಯಕ್ತಿಗಳ ಅಥವಾ ಸ್ವಯಂ ನಿಯೋಜಿತ ಕೆಲಸಗಾರರ ಒಡೆತನದಲ್ಲಿರುವ ಹಾಗೂ ಉತ್ಪಾದನೆಯಲ್ಲಿ ಅಥವಾ ಸರಕುಗಳ ಮಾರಾಟದಲ್ಲಿ ನಿರತರಾಗಿರುವ ಅಥವಾ ಇತರ ಯಾವುದೇ ಬಗೆಯ ಸೇವೆಯನ್ನು ಒದಗಿಸುತ್ತಿರುವ ಮತ್ತು ಉದ್ಯಮವು ಕೆಲಸಗಾರರನ್ನು ನಿಯೋಜಿಸಿ ಕೊಂಡಿದ್ದಾರೆ, ಅಂಥ ಕೆಲಸಗಾರರ ಸಂಖ್ಯೆಯು 10ಕ್ಕಿಂತ ಕಡಿಮೆ ಇರುವ ಒಂದು ಉದ್ಯಮ ಕಲಂ 2 (ಎಂ) "ಅಸಂಘಟಿತ ಕೆಲಸಗಾರರ" ಎಂದರೆ, ಗೃಹ ಆಧಾರಿತ ಕೆಲಸಗಾರ, ಸ್ವಯಂ ನಿಯೋಜಿತ ಕೆಲಸಗಾರ ಅಥವಾ ಅಸಂಘಟಿತ ವಲಯದ ಒಬ್ಬ ಮಜೂರಿ ಕೆಲಸಗಾರ ಮತ್ತು ಈ ಅಧಿನಿಯಮದ ಅನುಸೂಚಿ–11 ರಲ್ಲಿ ನಮೂದಿಸಿದ ಯಾವುದೇ ಅಧಿನಿಯಮಗಳಿಗೆ ಒಳಪಟ್ಟಿರದ ಸಂಘಟಿತ ವಲಯದಲ್ಲಿನ ಕೆಲಸಗಾರರನ್ನು ಒಳಗೊಳ್ಳುತ್ತದೆ, ಮತ್ತು ಕಲಂ 2(ಎನ್) "ಮಜೂರಿ ಕೆಲಸಗಾರ" ಎಂದರೆ, ಒಬ್ಬನೇ ನಿಯೋಜಕನಿಗಾಗಿಯಾಗಲಿ ಅಥವಾ ಒಬ್ಬ ಅಥವಾ ಹೆಚ್ಚು ನಿಯೋಜಕರಿಗಾಗಿಯಾಗಲಿ, ನಗದು ರೂಪದಲ್ಲಾಗಲಿ ಅಥವಾ ವಸ್ತು

ರೂಪದಲ್ಲಾಗಲಿ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಮಾಸಿಕ ಮಜೂರಿ ಮಬಲಗಿನ ಮೇಲೆ ಒಬ್ಬ ಗೃಹ ಆಧಾರಿತ ಕೆಲಸಗಾರನಾಗಿ ಯಾಗಲಿ ಅಥವಾ ಒಬ್ಬ ತಾತ್ಕಾಲಿಕ ಅಥವಾ ಸಾಂದರ್ಭಿಕ ಕೆಲಸಗಾರನಾಗಿಯಾಗಲಿ, ಅಥವ ಒಬ್ಬ ವಲಸೆ ಕೆಲಸಗಾರನಾಗಿ ಯಾಗಲಿ, ಅಥವಾ ಮನೆ ಕೆಲಸದವರೂ ಒಳಗೊಂಡಂತೆ ಇದ್ದರೂ, ಅಸಂಘಟಿತ ವಲಯದಲ್ಲಿ ಪರಿಶ್ರಮಧನದ ಸಂದಾಯದ ಮೇಲೆ ಒಬ್ಬ ನಿಯೋಜಕನಿಂದ ನೇರವಾಗಿ ಅಥವಾ ಯಾರೇ ಗುತ್ತಿಗೆದಾರನ ಮೂಲಕ ನಿಯೋಜಿತನಾದವ್ಯಕ್ತಿ.

ಆ) ಅಸಂಘಟಿತ ಕಾರ್ಮಿಕರ ಗಣತಿಯನ್ನು ರಾಜ್ಯದಲ್ಲಿ ಕೈಗೊಂಡಿರುವುದಿಲ್ಲ.

ಇ) ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಸಂಘಟಿತ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಎನ್‌ಪಿಎಸ್ ಲೈಟ್ ಸ್ವಾವಲಂಭನ್ ಯೋಜನೆ ಎಂಬ ಕಾಂಟ್ರಿಬ್ಯೂಟರಿ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯು ಪ್ರಾರಂಭಿಕವಾಗಿ ದರ್ಜಿಗಳು, ದೋಬಿಗಳು, ಹಮಾಲರು, ಆಟೋ, ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಲಾರಿ ಮತ್ತು ಬಸ್ ಚಾಲಕರು ಹಾಗೂ ನಿರ್ವಾಹಕರು, ಹೋಟೆಲ್ ಕಾರ್ಮಿಕರು, ಆಟೋ ಮೊಬೈಲ್ ವರ್ಕ್‌ಶಾಪ್‌ಗಳ ಕಾರ್ಮಿಕರಿಗೆ ಲಭ್ಯವಾಗಲಿದೆ.

ಈ) ಈ ಯೋಜನೆಯಡಿ ಇಲ್ಲಿಯವರೆಗೆ 3053 ಫಲಾನುಭವಿಗಳನ್ನು ನೊಂದಾಯಿಸಲಾಗಿದೆ.

ಜಲ ಸಂವರ್ಧನಾ ಕಾಮಗಾರಿಗಳು

31 (12) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲಸಂವರ್ಧನಾ ಇಲಾಖೆಯ ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮುಖಾಂತರ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಕಾಮಗಾರಿಗಳನ್ನು ನಿರ್ವಹಿಸಲು ಸಮುದಾಯವನ್ನು ಸೇರ್ಪಡಿಸಿಕೊಂಡು ಕೆರೆಗಳ ಅಭಿವೃದ್ಧಿ ಮತ್ತು ಕಾಮಗಾರಿಗಳನ್ನು ನಿರ್ವಹಿಸುವ ಉದ್ದೇಶವನ್ನು ಕೈಬಿಡಲು ಕಾರಣಗಳೇನು?